**ಅಸಲು ದಾವಾ ನಂಃ 10/2013**
**ಪಿ.ಡಬ್ಲ್ಯೂಃ -01**

**<u>ದಿನಾಂಕಃ 21.09.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಡಿ.ಸಿ., ಪ್ರತಿವಾದಿ ಪರ ವಕೀಲರಿಂದ</u>**

ಸರ್ವೆ ನಂ. 25/4 ಪಿ1 ಅಂದರೆ ದಾವಾ ಐಟಂ ನಂ. 3 ರಲ್ಲಿ ಎಲ್ಲಾ ಪ್ರತಿವಾದಿಗಳು ಪೂರ್ವದಿಂದ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅವರು ಎಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಅವರು ಬೇರೆ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಇರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 25/4 ಪಿ1 ರಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ಮನೆಗಳಿಗೆ ವಿದ್ಯುಸ್ ಸಂಪರ್ಕ ಇರುತ್ತದೆ ಎಂದರೆ ಸರಿಯಲ್ಲ. ಅದೇ ಮನೆಯ ವಿಳಾಸಕ್ಕೆ ಸಂಬಂಧಿಸಿದಂತೆ ಚುನಾವಣಾ ಗುರುತಿನ ಚೀಟಿಗಳನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಆದರೆ ದಾವಾ ಜಮೀನಿನ ವಿಳಾಸಕ್ಕೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

ಜಂಭಯ್ಯನಹಟ್ಟಿಯಲ್ಲಿದ್ದ ನಮ್ಮ ಪೂರ್ವಜರ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟುತ್ತಿದ್ದೇನೆ ಎಂದರೆ ಸರಿಯಲ್ಲ. ಭದ್ರಾನಾಯ್ಕ ಮತ್ತು ಲೋಕ್ಯಾನಾಯ್ಕರವರ ಮನೆಗೂ ಹಾಗೂ ನಾವು ವಾಸಮಾಡುತ್ತಿರುವ ಮನೆಗೂ ಸುಮಾರು 70 ಅಡಿ ದೂರದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ಊರಿನಲ್ಲಿ ಒಟ್ಟು 250 ಮನೆಗಳಿರುತ್ತವೆ ಎಂದು ನುಡಿಯುತ್ತಾರೆ.

ನಾನು ಎಲ್.ಆರ್. ನಾಯ್ಕ ಇವರ ಮನೆಯಲ್ಲಿ ನಾನು ಬಾಡಿಗೆಗೆ ಇದ್ದೇನೆ. ನಮ್ಮ ಮನೆಯ ಪಶ್ಚಿಮಕ್ಕೆ ನಾನು ಹೊಸ ಮನೆಯನ್ನು ಕಟ್ಟುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 118/2 ರಲ್ಲಿ 37 ಗುಂಟೆ ಜಮೀನು ಲೋಕ್ಯಾನಾಯ್ಕ ಮತ್ತು ಭದ್ರಾನಾಯ್ಕ ರವರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಲೋಕ್ಯಾನಾಯ್ಕ, ಭದ್ರಾನಾಯ್ಕ ಮತ್ತು ಲಚ್ಮಾನಾಯ್ಕ ಇವರು ಅಣ್ಣತಮ್ಮಂದಿರು ಎಂದರೆ ಸರಿಯಲ್ಲ. ಇವರ ತಂದೆ ಕಾಳ್ಯನಾಯ್ಕ ಹಾಗೂ ತಾಯಿ ಚಾಂದ್ಲಿ ಬಾಯಿ ಎಂದರೆ ಸರಿಯಲ್ಲ. ಲಚ್ಮಾನಾಯ್ಕನಿಗೆ ಇಬ್ಬರು ಹೆಂಡತಿಯರಿದ್ದು ಮೊದಲನೇ ಹೆಂಡತಿ ಶಾಂತಿಬಾಯಿ, 2 ನೇ ಹೆಂಡತಿ ಲಲಿತಬಾಯಿ ಎಂದರೆ ಸರಿಯಲ್ಲ.

1 ರಿಂದ 3 ನೇ ವಾದಿಯರು 5 ನೇ ವಾದಿಯ ಮಕ್ಕಳುಗಳು ಎಂದರೆ ಸರಿ. ಲೋಕ್ಯಾನಾಯ್ಕ ಮತ್ತು ಭದ್ರಾನಾಯ್ಕ ನನಗೆ ದೊಡ್ಡಪ್ಪಂದಿರಾಗಬೇಕು ಎಂದರೆ ಸರಿಯಲ್ಲ. ಲೋಕ್ಯಾನಾಯ್ಕ ಮತ್ತು ಭದ್ರಾನಾಯ್ಕ ರವರು ಸರ್ವೆ ನಂ. 98 ರಲ್ಲಿ 2 ಎಕರೆ ಜಮೀನನ್ನು ತಿಪ್ಪೇಸ್ವಾಮಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಉಳಿದ 2 ಎಕರೆ ಜಮೀನು ನನ್ನ ತಾಯಿಯ ಹೆಸರಿನಲ್ಲಿ ಅಂದರೆ 5 ನೇ ವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಈಗಲೂ ಸಹ ಪಹಣಿ ನನ್ನ ತಾಯಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ.

ಸರ್ವೆ ನಂ. 118/2 ರಲ್ಲಿ 37 ಗುಂಟೆಯನ್ನು ಲೋಕ್ಯಾನಾಯ್ಕ ಮತ್ತು ಭದ್ರಾನಾಯ್ಕ ಇವರು ವೀರಭದ್ರಪ್ಪ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಲಚ್ಮಾನಾಯ್ಕನ ತಾತನ ಹೆಸರು ಹೇಮ್ಲಾನಾಯ್ಕ ಎಂದರೆ ಸರಿ. ಹೇಮ್ಲಾನಾಯ್ಕನಿಗೆ ಕಾಳ್ಯನಾಯ್ಕ ಅಂತ ಒಬ್ಬನೇ ಮಗ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾಳ್ಯನಾಯ್ಕನ ಹೆಂಡತಿ ಚಾಂದ್ಲಿಬಾಯಿ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಕಾಳ್ಯನಾಯ್ಕನ ವಂಶಸ್ಥರಿಗೆ ಸೇರಿರುತ್ತೇವೆ ಎಂದರೆ ಸರಿಯಲ್ಲ.

1993 ರ ನಮ್ಮೂರಿನ ಮತದಾರರ ಪಟ್ಟಿಯಲ್ಲಿ ಕ್ರಮಸಂಖ್ಯೆಃ 154 -157 ಮನೆ ನಂ. 50 ಅದರಲ್ಲಿ ಲಚ್ಮಾನಾಯ್ಕ ತಂದೆ ಕಾಳ್ಯಾನಾಯ್ಕ, ಶಾಂತಿಬಾಯಿ ಕೋಂ ಲಚ್ಮಾನಾಯ್ಕ, ಲಲಿತಾಬಾಯಿ ಕೋಂ ಲಚ್ಮಾನಾಯ್ಕ ನಮೂದು ಇದ್ದು ಸದರಿ ವ್ಯಕ್ತಿಗಳು ನಮ್ಮ ವಂಶಸ್ಥರು ಎಂದರೆ ಸರಿಯಲ್ಲ. ಸದರಿ ಮನೆ ನಂ.50 ನನ್ನ ಮನೆತನಕ್ಕೆ ಸೇರಿದ್ದರೂ ಸಹ ಸೇರಿರುವುದಿಲ್ಲ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ ಕ್ರಮಸಂಖ್ಯೆಃ 431- 444 ಮನೆಸಂಖ್ಯೆಃ 137 ಮತ್ತು 138 ಇವುಗಳು ಪ್ರತಿವಾದಿಯವರ ವಂಶಸ್ಥರಿಗೆ ಸಂಬಂಧಿಸಿರುತ್ತದೆ ಎಂದರೆ ಸರಿಯಲ್ಲ.

2002 ನೇ ಇಸವಿಯಲ್ಲಿ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಕ್ರಮಸಂಖ್ಯೆಃ 356- 358 ರಲ್ಲಿ ಮನೆ ನಂ. 53 ರಲ್ಲಿ ನನ್ನ, ನನ್ನ ತಾಯಿಯ ಹಾಗೂ ಸಹೋದರಿಯರ ಹೆಸರಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ಬಾಡಿಗೆ ಮನೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ಕ್ರಮಸಂಖ್ಯೆಃ 701- 718 ರಲ್ಲಿ ಪ್ರತಿವಾದಿಯವರ ಹೆಸರು ನಮೂದು ಇರುತ್ತದೆ ಎಂದರೆ ಸರಿಯಲ್ಲ.

ದಿಃ 04.01.1991 ರಂದು ಲಚ್ಮಾನಾಯ್ಕನ ಮಕ್ಕಳಾದ ರಾಮ್‌ಜಿನಾಯ್ಕ ನಂದ್ಯಾನಾಯ್ಕ, ಚಂದ್ರನಾಯ್ಕ ಇವರು ಸರ್ವೆ ನಂ. 25/1 ರಲ್ಲಿ 2 ಎಕರೆ 25 ಗುಂಟೆ ಜಮೀನನ್ನು ಲಾಲಿ ಬಾಯಿ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ 3 ಜನರೂ ಲಚ್ಮಾನಾಯ್ಕನ ಮಕ್ಕಳು ಎಂದರೆ ಸರಿ. ಸದರಿ ಲಚ್ಮಾನಾಯ್ಕನಿಗೆ 3 ಜನ ಗಂಡು ಮಕ್ಕಳನ್ನು ಹೊರತುಪಡಿಸಿದರೆ ಬೇರೆ ಯಾರು ಮಕ್ಕಳು ಇರುವುದಿಲ್ಲ ಎಂದರೆ ಸರಿ.

1977 ನೇ ಸಾಲಿನ ವಿಧಾನಸಭಾ ಕ್ಷೇತ್ರ ಮತದಾರರ ಪಟ್ಟಿಯಲ್ಲಿ ಕ್ರಮಸಂಖ್ಯೆಃ 870- 876 ರ ವರಗೆ ಲೋಕ್ಯಾನಾಯ್ಕನ ವಂಶಸ್ಥರ ಹೆಸರು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ ಚಾಂದ್ಲಿಬಾಯಿ ಕಾಳ್ಯಾನಾಯ್ಕನ ಹೆಂಡತಿ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಲಚ್ಚಾನಾಯ್ಕ, ಕಾಳ್ಯಾನಾಯ್ಕನ ಮಗ ಎಂದರೆ ಸರಿಯಲ್ಲ. ಚಾಂದ್ಲಿಬಾಯಿ ಲಚ್ಮಾನಾಯ್ಕ ನ ಹೆಂಡತಿ ಎಂದರೆ ಸರಿಯಲ್ಲ.

ದಿಃ 20.12.1976 ರಲ್ಲಿ ರಾಮ್ ಜಿ ನಾಯ್ಕ ಮತ್ತು ಚಂದ್ರನಾಯ್ಕ ಇವರು ಅವರ ಭಾಗದ ಹಿಸ್ಸೆಯನ್ನು ನಂದ್ಯಾನಾಯ್ಕನಿಗೆ ಕ್ರಯ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಪ್ರತಿವಾದಿಗಳ ವಂಶಸ್ಥರಿಗೆ ಪೂರ್ವಜರಿಂದ ಬಂದಿರುತ್ತವೆ ಎಂದರೆ ಸರಿಯಲ್ಲ. ನಿಪಿಃ 1 ನ್ನು ನನ್ನ ಹೇಳಿಕೆಯಂತೆ ಬರೆಯಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮಹಜರ್ ಮಾಡಿ ಬರೆಯಲಾಗಿದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಶ್ರೀನಿವಾಸ್ ಅನ್ನುವವರು ಇದ್ದರು. ನಮಗೆ ಸೇರಿದ ಚುನಾವಣಾ ಗುರುತಿನ ಚೀಟಿ, ನನ್ನ ಅಜ್ಜಿಯ ಮೃತ್ಯು ಪ್ರಮಾಣ ಪತ್ರ ಹಾಗೂ ಆಧಾರ್ ಕಾರ್ಡನ್ನು ನೋಡಿ ನಿಪಿಃ 3 ನ್ನು ಬರೆದುಕೊಟ್ಟಿರುತ್ತಾರೆ. ಮಹಜರ್ ನ್ನು ಅವರಿಂದ ತೆಗೆದುಕೊಂಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ಚಂದ್ರನಾಯ್ಕನಿಗೆ ಕೇವಲ ಲಕ್ಷ್ಮೀಬಾಯಿ ಅಂತ ಹೆಂಡತಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮೊದಲನೇ ಹೆಂಡತಿ ಚಾಂದ್ಲಿ ಬಾಯಿ ಹಾಗೂ 2ನೇ ಹೆಂಡತಿ ಲಕ್ಷ್ಮೀಬಾಯಿ ಎಂದು ನುಡಿಯುತ್ತಾರೆ. ಚಾಂದ್ಲಿಬಾಯಿ ಎನ್ನುವವರು ಕಾಳ್ಯಾನಾಯ್ಕನ ಹೆಂಡತಿ ಎಂದರೆ ಸರಿಯಲ್ಲ.

ಚಾಂದ್ಲಿ ಬಾಯಿ ಇವರ ತವರೂರು ಎನ್. ದೇವರಹಳ್ಳಿ. ಅವರು ಮೃತರಾಗಿ ಸು. 20 ವರ್ಷಗಳಾಗಿರುತ್ತವೆ. ಲಚ್ಮಾನಾಯ್ಕ ಮೃತರಾಗಿ ಸು. 25 ವರ್ಷದ ಮೇಲೆ ಆಗಿರುತ್ತದೆ. 25 ವರ್ಷಗಳ ಹಿಂದೆ ಮತದಾನ ಮಾಡುತ್ತಿದ್ದ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನಿಪಿಃ 2 ರಿಂದ 4 ರ ಪಹಣಿಗಳಲ್ಲಿ ಪ್ರತಿವಾದಿಯವರ ವಂಶಸ್ಥರ (ದೊಡ್ಡಪ್ಪರವರ) ಹೆಸರು ನಮೂದಾಗಿವೆ ಎಂದರೆ ಸರಿಯಲ್ಲ. ನಿಪಿಃ 2 ರಿಂದ 4 ರ ಜಮೀನುಗಳು ಪ್ರತಿವಾದಿಯವರ ಸ್ವಾಧೀನದಲ್ಲಿರುತ್ತವೆ ಎಂದರೆ ಸರಿಯಲ್ಲ.

ಚಾಂದ್ಲಿಬಾಯಿ ಮೃತರಾಗುವ ಕಾಲಕ್ಕೆ ಸು. 60 ವರ್ಷದ ಮೇಲೆ ವಯಸ್ಸಾಗಿತ್ತು.ಅವರನ್ನು ನಾನು ನೋಡಿರುತ್ತೇನೆ. ನಿಪಿಃ7 ನ್ನು ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಂದ್ರಾನಾಯ್ಕನಿಗೆ ಸೇರಿದ ಚುನಾವಣಾ ಗುರುತಿನ ಚೀಟಿ ನನ್ನ ಬಳಿ ಇರುವುದಿಲ್ಲ. ನಿಪಿಃ 16 ರಿಂದ 18 ರಲ್ಲಿ ತಾಯಿಯ ಹೆಸರನ್ನು ಬರೆಯಲು ಸ್ಥಳವಿದ್ದು ಅಲ್ಲಿ ಉದ್ದೇಶಪೂರ್ವಕವಾಗಿ ತಾಯಿಯ ಹೆಸರನ್ನು ಬರೆಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿಃ 16 ರಿಂದ 18 ರಲ್ಲಿ ಚಂದ್ರಾನಾಯ್ಕನ ಮಗ ಲಚ್ಮಾನಾಯ್ಕ ಅಂತ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ.

**(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.